**ದಿನಾಂಕಃ 12.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿ ಪರ ಶ್ರೀ ಎ ಸಿ ವೈ ವಕೀಲರಿಂದಃ**

ದಿಃ 17.03.2020 ರಂದು ದಾವೆ ಹಾಕುವ ಸಂದರ್ಭದಲ್ಲಿ ಕೊಟ್ಟಂತಹ ದಾಖಲೆಗಳ ಆಧಾರದ ಮೇಲೆ ದಾವೆಯನ್ನು ದಾಖಲಿಸಿರುತ್ತೀರಿ ಅಂದರೆ ಸರಿಯಲ್ಲ. ಸದರಿ ದಾಖಲೆಗಳಲ್ಲಿ ಸಿಮೆಂಟ್ ಖರೀದಿಗೆ ಎಂದು ನಮೂದು ಇರುವುದಿಲ್ಲ ಅಂದರೆ ಸರಿಯಲ್ಲ. ನಿಡಿ–1 ರಲ್ಲಿ ಸಿಮೆಂಟ್ ಖರೀದಿ ನಮೂದು ಇದೆಯಾ ಅಂದರೆ ಸಾಕ್ಷಿಯು ಸೆಕೆಂಡ್ ಕಾಫಿ ಜನರೇಟ್ ಆದಾಗ ಟ್ಯಾಕ್ಸ್ ಗೆ ಸಂಬಂಧಪಟ್ಟಂತೆ ಮಾತ್ರ ಕಾಣುತ್ತದೆ, ಸಿಮೆಂಟ್ ಎಂದು ಕಾಣುವುದಿಲ್ಲ ಎಂದು ಉತ್ತರಿಸುತ್ತಾರೆ. ಒಮ್ಮೆ ಗ್ರಾಹಕರಿಗೆ ನೀಡಿದ ಬಿಲ್ ನಂತರ ಇನ್ನೊಮ್ಮೆ ಅದರಲ್ಲಿ ಯಾವುದೇ ಬದಲಾವಣೆ ಮಾಡಲು ಸಾಧ್ಯವಿಲ್ಲ ಅಂದರೆ ಸರಿ. ನಿಡಿ– 1 ರಲ್ಲಿ ಒಂದೆ ಹೆಸರು ಇದ್ದು, ನಿಪಿ–6 ರಲ್ಲಿ ಎರಡು ಹೆಸರು ಇದೆ ಅಂದರೆ ಸಾಕ್ಷಿಯು ಸೆಕೆಂಡ್ ಕಾಫಿ ಜನರೇಟ್ ಆದಾಗ ಖರೀದಿದಾರರ ಹೆಸರು ಎರಡು ಬಾರಿ ಕಾಣುತ್ತದೆ. ನಿಡಿ–1 ರಲ್ಲಿ ಜೆ ಕೆ ಸಿಮೆಂಟ್ ಎಂದು ಉಲ್ಲೇಖ ಇಲ್ಲ ಅಂದರೆ ಸರಿ. ನಿಪಿ–6 ರಲ್ಲಿ ಜೆ ಕೆ ಸಿಮೆಂಟ್ ಎಂದು ನಮೂದು ಇದೆ ಅಂದರೆ ಸರಿ. ನಿಡಿ– 1 ಮತ್ತು ನಿಪಿ–6 ರಲ್ಲಿ ರೆಫರೆನ್ಸ್ ನಂಬರ್ ಮತ್ತು ದಿನಾಂಕ ವ್ಯತ್ಯಾಸ ಇದೆ ಅಂದರೆ ಸರಿ. ನಿಡಿ–1 ರಲ್ಲಿ ಸೇಲ್ಸ್ ಮತ್ತು ಔಟ್ ಪುಟ್ ವ್ಯಾಟ್ ಇದ್ದು, ನಿಪಿ–6 ರಲ್ಲಿ ಔಟ್ ಪುಟ್ ವ್ಯಾಟ್ ಮಾತ್ರ ಇದೆ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಪಿ–6 ನಮ್ಮ ಆಡಿಟರ್ ಹತ್ರ ತೆಗೆದುಕೊಂಡ ಪ್ರತಿಯಾಗಿರುತ್ತದೆ ಎಂದು ಉತ್ತರಿಸುತ್ತಾರೆ. ನಾನು ಆಡಿಟರ್ ಹತ್ರ ನೀಡಿದ ಬಿಲ್ಲುಗಳ

ಆಧಾರದ ಮೇಲೆ ಅವರು ಆಡಿಟ್ ಮಾಡುತ್ತಾರೆ. ಅವುಗಳನ್ನು ಬದಲಿಸುವ ಸಂಬಂಧವೇ ಬರುವುದಿಲ್ಲ ಅಂದರೆ ಸರಿ. ನಿಡಿ–1 ರ ಮೇಲೆ ಒಂದು ಚೀಲಕ್ಕೆ ಎಷ್ಟು ಬೆಲೆ ಅಂತ ನಮೂದು ಇಲ್ಲ ಅಂದರೆ ಸರಿ. ಅದೇ ರೀತಿ ನಿಪಿ–6 ರಲ್ಲಿ ಅದು ನಮೂದು ಇರುತ್ತದೆ ಅಂದರೆ ಸರಿ. ನಾನು ದಿನಾಲು 8–10 ಜನ ಗ್ರಾಹಕರಿಗೆ ಸಿಮೆಂಟ್ ಮಾರಾಟ ಮಾಡಿ ರಶೀದಿಯನ್ನು ನೀಡುತ್ತೇನೆ. ನಿಪಿ–6 ಮತ್ತು ನಿಪಿ–7 ಕ್ಕೂ ಬಿಲ್ ನಂಬರ್ ಗೆ ಸಂಬಂಧಿಸಿದಂತೆ ನಾಲ್ಕು ನಂಬರ್ ವ್ಯತ್ಯಾಸ ಇದೆ ಅಂದರೆ ಸರಿ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.

**(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).**
**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**